ಇ) ಇದರಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಈ ನೆರವಿನ ಹಣವನ್ನು ರಾಜ್ಯ ಸರ್ಕಾರ ಇಲ್ಲಿಯವರೆಗೂ ಬಳಸದೆ ಇರುವುದು ನಿಜವೆ

ಈ) ಇದಕ್ಕೆ ರಾಜ್ಯ ಸರ್ಕಾರ ಕೈಮಗ್ಗ ನೇಕಾರರ ಬಗ್ಗೆ ಇರುವ ನಿರ್ಲಕ್ಷ ಧೋರಣೆಯೆ ಕಾರಣವಲ್ಲವೆ?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ಹೌದು ಆ ಯೋಜನೆಗಳು ಈ ಕೆಳಕಂಡಂತಿವೆ

1 ದೀನದಯಾಳ್ ಹತ್‌ಕರ್ಗಾ ಪ್ರೋತ್ಸಾಹನಾ ಯೋಜನೆ

2 ನೇಕಾರರ ವಸತಿ ಕಾರ್ಯಾಗಾರ ಯೋಜನೆ

3 ಆರೋಗ್ಯ ಬುತ್ತಿ ಯೋಜನೆ

4 ಗುಂಪು ವಿಮಾ ಯೋಜನೆ

5 ಮಿತವ್ಯಯನಿಧಿ ಯೋಜನೆ

6 ಜಿಲ್ಲಾ ಮಟ್ಟದ ಉತ್ಪನ್ನಗಳು

7 ರಾಷ್ಟ್ರೀಯ ಕೈಮಗ್ಗ ಮೇಳ

8 ಸಮಗ್ರ ಕೈಮಗ್ಗ ತರಬೇತಿ ಯೋಜನೆ

ಆ) ಆ ವಿವರ ಈ ಕೆಳಕಂಡಂತಿದೆ ಕೆ ಕೈ.ಅ ನಿ–ರೂ 357 22 ಲಕ್ಷ ಕೈಮಗ್ಗ ಸಹಕಾರ ಸಂಘಗಳಿಗೆ
ರೂ 86 38 ಲಕ್ಷ
ಒಟ್ಟು ರೂ 443 60 ಲಕ್ಷ

ಇ) ಪೂರ್ಣ ಹಣವನ್ನು ಖರ್ಚು ಮಾಡಲಾಗಿದ್ದು ರಾಜ್ಯ ಸರ್ಕಾರದಲ್ಲಿ ಯಾವುದೇ ಹಣ ಬಾಗಿ ಇರುವುದಿಲ್ಲ

ಈ) ಉದ್ಭವಿಸುವುದಿಲ್ಲ

ರಾಜ್ಯದಲ್ಲಿರುವ ಕೈಮಗ್ಗಗಳು

233 (560) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಕೈಮಗ್ಗಗಳ ಸಂಖ್ಯೆ ಎಷ್ಟು ಉತ್ತರ ಕರ್ನಾಟಕ ಭಾಗದಲ್ಲಿ ಎಷ್ಟು ಕೈಮಗ್ಗಗಳು ಚಾಲ್ತಿಯಲ್ಲಿವೆ ಜಿಲ್ಲಾವಾರು ವಿವರ ನೀಡುವುದು

ಆ) ರಾಜ್ಯದಲ್ಲಿನ ಬಹುತೇಕ ಕೈಮಗ್ಗಗಳು ಮುಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಈ ಕೈಮಗ್ಗಗಳ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಇ) ವಿದ್ಯಾವಿಕಾಸ್ ಯೋಜನೆಯಡಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಿಸಲು ಮತ್ತು ಸರ್ಕಾರದ ಎಲ್ಲಾ ಇಲಾಖೆಗಳ ನೌಕರರಿಗೆ ಸಮವಸ್ತ್ರ ನೀಡಲು ಬೇಕಾದ ಎಲ್ಲಾ ಬಟ್ಟೆಯನ್ನು ಕೆ ಹೆಚ್ ಡಿ ಸಿ ಯಿಂದಲೇ ಖರೀದಿಸುವಂತೆ ಸರ್ಕಾರ ಆದೇಶ ಹೊರಡಿಸಬಹುದಲ್ಲವೆ

ಈ) ಇದರಿಂದ ನೇಕಾರರಿಗೆ ಸಾಕಷ್ಟು ಕೆಲಸ ದೊರೆಯುವುದಿಲ್ಲವೆ

ಉ) ಸಾಕಷ್ಟು ಕೆಲಸವಿಲ್ಲದೆ ಎಷ್ಟು ಜನ ನೇಕಾರರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಜಿಲ್ಲಾವಾರು ವಿವರ ನೀಡುವುದು ಅಂತಹ ಕುಟುಂಬಗಳಿಗೆ ಸರ್ಕಾರ ನೀಡಿರುವ ಪರಿಹಾರವೇನು?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) 1995–96ನೇ ಸಾಲಿನ ಕೈಮಗ್ಗಗಳ ಗಣತಿಯ ಪ್ರಕಾರ ರಾಜ್ಯದಲ್ಲಿ ಒಟ್ಟು 76605 ಕೈಮಗ್ಗಗಳು ಚಾಲ್ತಿಯಲ್ಲಿದ್ದು ಅದರಲ್ಲಿ ಉತ್ತರ ಕರ್ನಾಟಕದಲ್ಲಿರುವ 47483 ಕೃಮಗ್ಗಗಳು ಸೇರಿರುತ್ತವೆ ಜಿಲ್ಲಾವಾರು ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ

ಆ) ಹೌದು

ಕೈಮಗ್ಗಗಳ ಪುನಶ್ಚೇತನಕ್ಕೆ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ

1 ದೀನದಯಾಳ್ ಹತ್‌ಕರ್ಗಾ ಪ್ರೋತ್ಸಾಹನ ಯೋಜನೆಯಡಿ ತರಬೇತಿ ಮಗ್ಗ ಖರೀದಿ ಡಿಸೈನ್ ಅಭಿವೃದ್ಧಿ ಜಕಾರ್ಡ್ ಡಾಬಿ ಖರೀದಿಸುವುದು ಮಾರುಕಟ್ಟೆ ಪ್ರೋತ್ಸಾಹ ಧನವನ್ನು ಸಹಕಾರ ಸಂಘಗಳ / ಕೆಹೆಚ್‌ಡಿಸಿ ಮೂಲಕ ನೀಡುವುದು

2 ಸಮಗ್ರ ಕೈಮಗ್ಗ ನೇಕಾರರ ತರಬೇತಿ ಯೋಜನೆ

3 ಪ್ರಸ್ತಾಪಿತ ಕರ್ನಾಟಕ ಕೈಮಗ್ಗ ನಿಗಮ ನಿಯಮಿತದ ಆರ್ಥಿಕ ಪುನರ್ ರಚನೆ ಹಾಗೂ ಪುನರ್‌ವಸತಿ

ಇ) ದಿನಾಂಕ 20 08 2002 ರಂದು ಸರ್ಕಾರ ಸುತ್ತೋಲೆ ಹೊರಡಿಸಿರುತ್ತದೆ

ಈ) ಹೌದು

ಉ) ಅಂತಹ ಪ್ರಕರಣಗಳು ಮಾಡಿರುವುದಿಲ್ಲ

ಅನುಬಂಧ

ಕ್ರ ಸ	ಜಿಲ್ಲೆಯ ಹೆಸರು	ಕೈಮಗ್ಗಗಳ ಸಂಖ್ಯೆ	ವಿದ್ಯುತ್ ಮಗ್ಗಗಳ ಸಂಖ್ಯೆ
1	ಬೆಳಗಾಂ	5099	14650
2	ಬಳ್ಳಾರಿ	2402	28
3	ಬೀದರ್	1336	0
4	ಬಿಜಾಪುರ	3756	1750
5	ಬಾಗಲಕೋಟೆ	20599	9918
6	ಧಾರವಾಡ	891	230
7	ಗದಗ್	4012	1081
8	ಹಾವೇರಿ	4016	1086
9	ಗುಲ್ಬರ್ಗ	3525	34
10	ರಾಯಚೂರು	274	89
11	ಕೊಪ್ಪಳ	1499	356

ಕ್ರ ಸ	ಜಿಲ್ಲೆಯ ಹೆಸರು	ಕೈಮಗ್ಗಗಳ ಸಂಖ್ಯೆ	ವಿದ್ಯುತ್ ಮಗ್ಗಗಳ ಸಂಖ್ಯೆ
12	ಉತ್ತರ ಕನ್ನಡ	74	31
	ಒಟ್ಟು	47483	29253

ರಾಜ್ಯದಲ್ಲಿರುವ ಕೈಮಗ್ಗ ಹಾಗೂ ವಿದ್ಯುತ್ ಚಾಲಿತ ಮಗ್ಗಗಳು

234 (562) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಗ್ರಾಮೀಣ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಜಿಲ್ಲಾವಾರು ಕೈಮಗ್ಗ ಹಾಗೂ ವಿದ್ಯುಚ್ಚಾಲಿತ ಮಗ್ಗಗಳ ಸಂಖ್ಯೆ ಎಷ್ಟು

ಆ) ಈ ಮಗ್ಗಗಳನ್ನು ಅವಲಂಬಿಸಿಕೊಂಡಿರುವ ನೇಕಾರರ ಸಂಖ್ಯೆ ಎಷ್ಟು

ಇ) ನೇಕಾರರಿಗೆ ಮಾಲು ಸರಬರಾಜು ಮಾಡುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಈ) ರಾಜ್ಯದಲ್ಲಿರುವ ಎಲ್ಲಾ ರೀತಿಯ ಕೈಮಗ್ಗಗಳು ಉತ್ಪಾದಿಸುತ್ತಿರುವ ಬಟ್ಟೆಯ ಪ್ರಮಾಣ ಹಾಗೂ ಇದರ ಒಟ್ಟು ಮೌಲ್ಯ ಎಷ್ಟು

ಉ) ಕೈಮಗ್ಗಗಳ ಮಾಲೀಕರು ಆರ್ಥಿಕವಾಗಿ ದುಸ್ತಿತಿಯಲ್ಲಿದ್ದು ಅನೇಕ ಕೈಮಗ್ಗಗಳು ಮುಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಊ) ಕೈಮಗ್ಗಗಳ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ

ಆ) ಕೈಮಗ್ಗ ನೇಕಾರರು – 1,89,934

ವಿದ್ಯುತ್ ಮಗ್ಗ ನೇಕಾರರು – 1,27,535

ಇ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಕಾವೇರಿ ಹ್ಯಾಂಡಲೂಮ್ಸ್, ಕರ್ನಾಟಕ ರಾಜ್ಯ ಉಣ್ಣೆ ನೇಕಾರರ ಸೇವಾ ಸಹಕಾರ ಸಂಘಗಳಿಗೆ ಕಚ್ಚಾಮಾಲನ್ನು ಸರಬರಾಜು ಮಾಡಲಾಗುತ್ತಿದೆ

ಈ) ಉತ್ಪಾದಿಸುತ್ತಿರುವ ಬಟ್ಟೆಯ ಪ್ರಮಾಣ ಸುಮಾರು 63 90 ಮಿಲಿಯನ್ ಮೀಟರ್ ಆಗಿದ್ದು ಅದರ ಅಂದಾಜು ಮೌಲ್ಯ ರೂ 319 50 ಕೋಟಿ ಆಗಿರುತ್ತದೆ

ಉ) ಬಂದಿದೆ

ಊ) ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಅವುಗಳಲ್ಲಿ ಈ ಕೆಳಗಿನವುಗಳು ಮುಖ್ಯವಾದವುಗಳಾಗಿರುತ್ತದೆ –

1 ದೀನದಯಾಳ್ ಹತ್‌ಕರ್ಗಾ ಪ್ರೋತ್ಸಾಹನ ಯೋಜನೆ

2 ಸಮಗ್ರ ಕೈಮಗ್ಗ ತರಬೇತಿ ಯೋಜನೆ

ಅನುಬಂಧ

ಕ್ರ ಸಂ	ಜಿಲ್ಲೆಯ ಹೆಸರು	ಕೈಮಗ್ಗಗಳ ಸಂಖ್ಯೆ	ವಿದ್ಯುತ್ ಮಗ್ಗಗಳ ಸಂಖ್ಯೆ
1	2	3	4
1	ಬೆಂಗಳೂರು (ನ)	8352	25321